'ಕಷ್ಟ ಸುಖ ಮಾತಾಡಲು ಒಂದು ಹೆಣ್ಣು ಜೀವ ಬೇಕಿತ್ತು' ಎಂದು ಅಲವತ್ತುಕೊಂಡಿದ್ದಳು. ದೊಡ್ಡವ ಸುಮಂತನಲ್ಲಿ ಅಪ್ಪನ ಹೋಲಿಕೆಯೇ ಜಾಸ್ತಿ. ಎರಡನೆಯ ಜಯಂತನಿಗೆ ಹೋಲಿಕೆಯಿದ್ದರೂ ಅವ ಸತ್ಯನ ಬಾಲದಂತೆ ಬೆಳೆದ. ಅದನ್ನೂ ಮೇಷ್ಟ್ರೇ ಎಷ್ಟೋ ಸಾರಿ ಹೇಳುತ್ತಿದ್ದರು, 'ನೋಡು, ಅಮ್ಮನ ಬಾಲೋಳಿ ಬಂತು'. ಮೇಷ್ಟ್ರಿಲ್ಲದ ಹೊತ್ತಿನಲ್ಲಿ 'ಅಮೃತಾಹೊ ನೀ ಗೋಡ ನಾಮ ತುಝೆ ದೇವಾ...' ಸತ್ಯ ಹಾಡುತ್ತಿದ್ದರೆ ಜಯಂತ ಎಷ್ಟು ಪರವಶನಾಗುತ್ತಿದ್ದ ಎಂದರೆ ಜೊತೆಯಲ್ಲಿ ತಾನೂ ಹಾಡುತ್ತಿದ್ದ. ಅಪ್ಪ ದತ್ತು ಮೇಷ್ಟ್ರು ಇದ್ದಾಗ ಹಾಡಿದರೆ, 'ಹರಿಕತೆ ದಾಸನ ಹಾಗೆ ಹಾಡಿದ್ರೆ ಸಾಲದು, ಶಾಲೆಯಲ್ಲಿ ಮಾರ್ಕೂ ತಕೊಂಡು ಬರಬೇಕು' ಅಪ್ಪನ ಮಾತಿಗೆ ಪೆಚ್ಚಾಗುತ್ತಿತ್ತು ಮಗು ಜಯಂತ. ಆದರೂ ಬಿಡದೇ, 'ಆಯಿಯೂ ಹಾಡ್ತಾಳೆ ಅಪ್ಪಯ್ಯ. ಶಾಂತಿ ಟೀಚರಿಗಿಂತ ತುಂಬಾ ಚೆನ್ನಾಗಿ ಹಾಡ್ತಾಳೆ. ಹಾರ್ಮೋನಿಯಂ ಕೂಡಾ ನುಡಿಸ್ತಾಳೆ' ಅಂದೇ ಬಿಟ್ಟ. ದತ್ತು ಮೇಷ್ಟ್ರು ಸತ್ಯನ ಮುಖ ನೋಡಿ, 'ಓದಿನ ಕಡೆ ಗಮನ ಕೊಡ್ನೋದು ಬಿಟ್ಟು ನಿನ್ನ ಈ ಹರಿಕಥೆಗಳನ್ನು ಮಕ್ಕಳ ತಲೆಗೂ ತುಂಬಿಸಬೇಡ. ಜವಾಬ್ದಾರಿ ಬೇಕು ಮನುಷ್ಯನಿಗೆ. ನಿನ್ನ ಹುಚ್ಚುಗಳನ್ನು ಮಕ್ಕಳಿಗೆ ಕಲಿಸಬೇಡ' ಬಾಣದಂತೆ ಮಾತುಗಳನ್ನು ಎಸೆದು ಆಚೆ ಹೋದಾಗ ಜಯಂತ ಏನೋ ಅರ್ಥವಾದಂತೆ ಬಂದು ಕೈ ಹಿಡಿದಿದ್ದ. ಸತ್ಯ ಸುಮ್ಮನೆ ಕಣ್ಣು ಮಿಟುಕಿಸಿ ನಕ್ಕಿದ್ದಳು, ಅಷ್ಟೇ!

ಗಂಡನ ಒರಟುತನವನ್ನು, ಮಾಡುವ ಅವಮಾನಗಳನ್ನು 'ಯಾಕಿರಬಹುದು' ಎನ್ನುವ ಯೋಚನೆಯನ್ನೂ ಸತ್ಯ ಮಾಡಲಿಲ್ಲ. ಅವನು ಎಷ್ಟೇ ಒರಟಾಗಿ ವರ್ತಿಸಿದರೂ ಸತ್ಯ ಓದುವ ಅಭ್ಯಾಸವನ್ನು ಮಾತ್ರ ಬಿಡಲಿಲ್ಲ. ಆದಷ್ಟು ಜಾಗ್ರತೆಯಿಂದ ಕಪಾಟಿನ ಪುಸ್ತಕಗಳು ಆಚೆಈಚೆ ಆಗದಂತೆ ನೋಡಿಕೊಂಡು ತನ್ನ ಓದನ್ನು ಮುಂದುವರೆಸಿದಳು. ಆಗೊಮ್ಮೆ ಈಗೊಮ್ಮೆ ಪುಸ್ತಕಗಳ ಸ್ಥಾನಪಲ್ಲಟದಿಂದ ಮೇಷ್ಟ್ರರಿಂದ ಸಹಸ್ರನಾಮಾರ್ಚನೆ ಕೇಳುವುದೂ ಅವಳಿಗೆ ದೊಡ್ಡ ವಿಷಯವಾಗಲೇ ಇಲ್ಲ. 'ಮಕ್ಕಳೊಮ್ಮೆ ದೊಡ್ಡದಾಗಲಿ, ಒಳ್ಳೆ ಬದುಕು ಕಟ್ಟಿಕೊಂಡರೆ ಸಾಕು ದೇವಾ' ನಿತ್ಯದ ಪ್ರಾರ್ಥನೆಯಾಗಿತ್ತು. ಹೈಸ್ಕೂಲಿನಲ್ಲಿದ್ದಾಗ ಒಮ್ಮೆ ಸುಮಂತ, ತಮ್ಮ ಜಯಂತನಿಗೆ ಏನೊ ಒರಟಾಗಿ ಮಾತಾಡಿದ್ದು ನೋಡಿದಾಗ, 'ಪ್ರೀತಿಯಿಂದ ಮಾತಾಡೋದು ಅಷ್ಟು ಕಷ್ಟ ಯಾಕಾಗುತ್ತೆ ಸುಮಂತ, ನಿನ್ನತ್ರನೂ ಒರಟಾಗಿ, ಜೋರಾಗಿ ಮಾತಾಡಿದರೆ ನಿಂಗೆ ಖುಷಿಯಾಗುತ್ತಾ? ಇಲ್ಲಾ ತಾನೇ? ಹಾಗೇ... ಒಳ್ಳೆಯತನ ಅನ್ನೋದು, ಸ್ನೇಹಿತರೊಂದಿಗೆ ಮಾಡುವ ಹೊರಗಡೆಯ ನಾಟಕವಲ್ಲ. ಅದು ಒಳಗಿಂದ ಬರಬೇಕು. ಮನೆಯವರತ್ರನೂ ಬರಬೇಕು. ಚೆಂದದ ಮಾತುಗಳು ನಮ್ಮ ದುರ್ಬಲತೆಯಲ್ಲ. ನೀನು ಗಟ್ಟಿ ಮನುಷ್ಯ, ಆದರೆ ಒಳ್ಳೆಯ ಮಾತನ್ನೇ ಆಡಿ ತೋರಿಸು' ಎಂದು ಮುಲಾಜಿಲ್ಲದೇ ಹೇಳಿದ್ದಳು. ಮತ್ತೆ ಅಂದುಕೊಳ್ಳುತ್ತಿದ್ದಳು, ಇದನ್ನು ಆರಂಭದಲ್ಲೇ ಗಂಡ ದತ್ತುಗೂ ಹೇಳ್ತಿದ್ರೆ ಇಷ್ಟು ಪರಿಸ್ಥಿತಿ ಹದಗೆಡುತ್ತಿರಲಿಲ್ವೋ ಏನೋ ಎಂದು. ಇವಳತ್ರ ಸ್ವಲ್ಪ ಮಾತಾಡಿದ್ರೆ ಎಲ್ಲಿ ತನ್ನ ಕಿರೀಟ

